## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್.-1720/2017/ಡಿ.ಆರ್.ಇ-2

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.

ದಿನಾಂಕ : 22/11/2019
5/12/19

### ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: (1) ಶ್ರೀ ಎಸ್.ಸುಮಿತ್ರ, ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ, (2) ಶ್ರೀ ಎಸ್.ಡಿ.ನಾರಾಯಣ ಪೂಜಾರಿ, ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಓ & ಎಂ ವಿಭಾಗ, ಪುತ್ತೂರು, (3) ಶ್ರೀ ರಾಜಶೇಖರ್ ಪುರಾಣಿಕ್, ಪರಿಸರ ಅಧಿಕಾರಿ, ಪುತ್ತೂರು ತಾಲ್ಲೂಕು, ಪುತ್ತೂರು ಮತ್ತು, (4) ಶ್ರೀ ಸುಬ್ರಹ್ಮಣ್ಯ ರಾವ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಪುತ್ತೂರು ತಾಲ್ಲೂಕು, ಪುತ್ತೂರು ರವರುಗಳು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

ಶ್ರೀ ಎ.ಕೇಶವ್ ಭಟ್, ವಕೀಲರು, ನಂ. 16, 1ನೇ ಮಹಡಿ, 6ನೇ ಮೇನ್, 14ನೇ ಕ್ರಾಸ್, ವೈಯಾಲಿಕಾವಲ್, ಬೆಂಗಳೂರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಶ್ರೀ ಎಸ್.ಸುಮಿತ್ರ, ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ, (2) ಕಾರ್ಯಪಾಲಕ ಅಭಿಯಂತರರು, ಮೆಸ್ಕಾಂ, ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ '1 ಮತ್ತು 2ನೇ ದುರುದಾರರು' ಎಂದು ಕರೆಯಲ್ಪಡುತ್ತಾರೆ) ತನಿಖೆಯಲ್ಲಿ (3) ಶ್ರೀ ಎಸ್.ಡಿ.ನಾರಾಯಣ ಪೂಜಾರಿ, ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಓ & ಎಂ ವಿಭಾಗ, ಪುತ್ತೂರು, (4) ಶ್ರೀ ರಾಜಶೇಖರ್ ಪುರಾಣಿಕ್, ಪರಿಸರ ಅಧಿಕಾರಿ, ಪುತ್ತೂರು ತಾಲ್ಲೂಕು, ಪುತ್ತೂರು ಮತ್ತು, (5) ಶ್ರೀ ಸುಬ್ರಹ್ಮಣ್ಯ ರಾವ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಪುತ್ತೂರು ತಾಲ್ಲೂಕು, ಪುತ್ತೂರು (ಇನ್ನು ಮುಂದೆ '3 ರಿಂದ 5ನೇ ದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ಬೆಳ್ತಂಗಡಿ ತಾಲ್ಲೂಕು ಮೊಗೂರು ಗ್ರಾಮದ ಸರ್ವೆ ನಂ. 62 ಮತ್ತು 72ರಲ್ಲಿ ಅನಧಿಕೃತವಾಗಿ ಕಲ್ಲುಗಣಿಗಾರಿಕೆ ಮಾಡುತ್ತಿದ್ದಾರೆ, ಈ ಬಗ್ಗೆ ಸ್ಥಳೀಯ ವ್ಯಕ್ತಿಯೊಬ್ಬರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 39001/2015 ನೇದ್ದನ್ನು ಸಲ್ಲಿಸಿದ್ದ, ಆತನಿಗೆ ಬೆದರಿಕೆ ಹಾಗೂ ಒತ್ತಡ ಹೇರಿದ್ದರಿಂದ ಆತ ಹಿಂದಕ್ಕೆ ಪಡೆದುಕೊಂಡಿದ್ದಾನೆ, ಆದ್ದರಿಂದ, ತಾನು ಸ್ವತ: ರಿಟ್ ಅರ್ಜಿ ಸಂಖ್ಯೆ: 3221/2017 ನೇದ್ದನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದೆ, ಅದರಲ್ಲಿ ತನಗೆ ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರಲ್ಲಿ ದೂರು ಸಲ್ಲಿಸಲು ನಿರ್ದೇಶಿಸಿ ರಿಟ್ ಅರ್ಜಿಯನ್ನು ಮುಕ್ತಾಯಗೊಳಿಸಿದ್ದಾರೆ.

3. ತಾನು ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ದೂರು ನೀಡಿದ್ದು, ಅವರು ದಿನಾಂಕ: 21/03/2013 ರಂದು ರೂ.3,60,000/-- ದಂಡವನ್ನು ಅಕ್ರಮ ಗಣಿ ಮಾಡುವವರಿಗೆ ವಿಧಿಸಿದ್ದಾಗಿ ಹೇಳಿ ಪ್ರಕರಣ ಮುಕ್ತಾಯ ಮಾಡಿದ್ದಾರೆ. ಆದ್ದರಿಂದ, ತಾನು ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ಇವರಿಗೆ ದೂರು ಸಲ್ಲಿಸಿದ್ದೆ, ಆದರೆ ಅವರು ಯಾವುದೇ ಕ್ರಮ ಜರುಗಿಸಿಲ್ಲ. ನಂತರ ತಾನು ಅಕ್ರಮ ಗಣಿಗಾರಿಕೆಗೆ ಕಾನೂನು ಬಾಹಿರವಾಗಿ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದಾರೆ ಎಂಬ ಬಗ್ಗೆ ಮೆಸ್ಕಾಂ ಅಧಿಕಾರಿಗಳಿಗೆ ದೂರು ಸಲ್ಲಿಸಿದ್ದರೂ ಸಹಿತ ಅವರು ಯಾವುದೇ ಕ್ರಮ ಕೈಗೊಂಡಿಲ್ಲ.

4. ಬೆಳ್ತಂಗಡಿ ತಾಲ್ಲೂಕು ಮೊಗೂರು ಗ್ರಾಮದ ಸರ್ವೆ ನಂ. 62 ಮತ್ತು 72ರಲ್ಲಿ ಕಳೆದ ಹಲವಾರು ವರ್ಷಗಳಿಂದ ಅನಧಿಕೃತವಾಗಿ ಕಲ್ಲುಗಣಿಗಾರಿಕೆ ಮಾಡಿ ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರಕ್ಕೆ ನಷ್ಟ ಪಡಿಸಿದ್ದಾರೆ. ಆದ್ದರಿಂದ, ಅಕ್ರಮ ಗಣಿಗಾರಿಕೆ ಮಾಡಿರುವ ಶ್ರೀ ಪಿ.ಯೋಗೇಶ್ ಬಿನ್ ದಿನಕರ್ ಪೂಜಾರಿ ಮತ್ತು ಶ್ರೀ ಕೆ.ಪಿ.ಪ್ರಸಾದ್ ಬಿನ್ ಬಾಬು ಪೂಜಾರಿ ಇವರ ವಿರುದ್ಧ ಹಾಗೂ ಸಹಕರಿಸಿದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿದ್ದಾರೆ.

5. ದೂರುದಾರರು ದಿನಾಂಕ: 07/02/2017 ರಂದು ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಂಗಳೂರು ರವರಿಗೆ ಸಲ್ಲಿಸಿರುವ ದೂರು, ದಿನಾಂಕ: 21/03/2017 ರಂದು ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ರವರು ಶ್ರೀ ಪ್ರಸಾದ್ ಬಿನ್ ಬಾಬು ಪೂಜಾರಿ ರವರಿಗೆ ರೂ.3,60,000/-- ದಂಡವನ್ನು 15 ದಿನಗಳ ಒಳಗಾಗಿ ಭರಿಸಬೇಕು, ತಪ್ಪಿದಲ್ಲಿ ಕಾನೂನು ಕ್ರಮ ಜರುಗಿಸಲಾಗುವುದೆಂದು ನೀಡಿದ ನೋಟಿಸ್, ದಿನಾಂಕ: 23/07/2017 ರಂದು ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ಇವರಿಗೆ ಸಲ್ಲಿಸಿರುವ ದೂರಿನ ಪ್ರತಿ ಹಾಗೂ ಮೆಸ್ಕಾಂ

ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಕಿರಿಯ ಅಭಿಯಂತರರು ಸಲ್ಲಿಸಿರುವ ದೂರಿನ ಪ್ರತಿಗಳನ್ನು ಹಾಜರುಪಡಿಸಿದ್ದಾರೆ.

6. ದಿನಾಂಕ: 02/07/2017 ರಂದು ಮಾನ್ಯ ಗೌರವಾನ್ವಿತ ಉಪಲೋಕಾಯುಕ್ತರು ದೂರುದಾರರು ಆಪಾದಿಸಿರುವ ಅಂದರೆ ಅಕ್ರಮ ಗಣಿಗಾರಿಕೆ ನಡೆಯುತ್ತಿರುವ ಸ್ಥಳಕ್ಕೆ ಭೇಟಿ ನೀಡಿದ್ದು, ಆ ಸಮಯದಲ್ಲಿ ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಂಗಳೂರು ರವರು ಭೂವಿಜ್ಞಾನಿ, ತಹಶೀಲ್ದಾರ್, ಬೆಳ್ತಂಗಡಿ; ಎ.ಸಿ.ಎಫ್., ಪುತ್ತೂರು ಉಪ ವಿಭಾಗ; ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಮಂಗಳೂರು; ಕಂದಾಯ ನಿರೀಕ್ಷಕರು; ತಾಲ್ಲೂಕು ಸರ್ವೇಯರ್; ಎ.ಇ.ಇ., ಮೆಸ್ಕಾಂ ಹಾಗೂ ದೂರುದಾರರು ಹಾಜರಿದ್ದರು, ಅವರ ಸಮಕ್ಷಮ ಸ್ಥಳ ಪರಿಶೀಲನೆ ಮಾಡಿದ ಮಾನ್ಯ ಗೌರವಾನ್ವಿತರು ಪ್ರಾಥಮಿಕ ತನಿಖೆಯಿಂದ ಕೆಳಕಂಡ ಅಂಶಗಳು ಕಂಡುಬಂದಿರುವುದಾಗಿ ಆದೇಶ ಪುಟದಲ್ಲಿ ಉಲ್ಲೇಖಿಸಿದ್ದಾರೆ.

(1) ಅರಣ್ಯ ಮತ್ತು ಕಂದಾಯ ಭೂಮಿಯ ಗಡಿ ಗುರುತಿಸಿಲ್ಲ,

(2) ಮಂಜೂರಾದ ಭೂಮಿಯ ಗಡಿ ಗುರುತಿಸಿಲ್ಲ ಮತ್ತು ಪೋಡಿ ಮಾಡಿಲ್ಲ.

(3) ಅರಣ್ಯ ಭೂಮಿ ಮತ್ತು ಕಂದಾಯ ಭೂಮಿಯ ವಿಸ್ತೀರ್ಣವನ್ನು ಗುರುತಿಸಿಲ್ಲ.

(4) ಸರ್ವೆ ಇಲಾಖೆಯವರು ಪಿ ನಂಬರ್‌ಗಳನ್ನು ನೀಡಿದ್ದು, ಆಕ್ಷೇಪರ್ಹವಾಗಿದೆ, ಅದರಿಂದಾಗಿ ಅರಣ್ಯ ಭೂಮಿಯಲ್ಲಿ ಒತ್ತುವರಿಯಾದುದ್ದನ್ನು ಕಂಡುಹಿಡಿಯಲು ಆಗಿಲ್ಲ ಮತ್ತು ಭೂ ಮಂಜೂರಾತಿ ಪಡೆದವರು ತಮ್ಮ ಅನುಕೂಲಕ್ಕೆ ತಕ್ಕಂತೆ ಗಡಿಗಳನ್ನು ಗುರುತಿಸಿಕೊಳ್ಳದೇ ಭೂಮಿಯನ್ನು ಉಪಯೋಗಿಸುತ್ತಿದ್ದಾರೆ.

(5) ಅಲ್ಲದೇ, ಗಣಿ ಮತ್ತು ಭೂವಿಜ್ಞಾನ ಇಲಾಖೆಯವರು ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸುವುದಕ್ಕಾಗಿ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ, ಗುತ್ತಿಗೆ ಅವಧಿ ಮುಗಿದರೂ ಸಹಿತ ಕಾನೂನು ಬಾಹಿರವಾಗಿ ನಡೆಯುವ ಚಟುವಟಿಕೆಗಳನ್ನು ತಡೆಯುವಲ್ಲಿ ವಿಫಲರಾಗಿದ್ದಾರೆ.

7. ಮಾನ್ಯ ಗೌರವಾನ್ವಿತರ ಪ್ರಾಥಮಿಕ ತನಿಖೆಯಿಂದಲೇ ಗಣಿ ಮತ್ತು ಭೂವಿಜ್ಞಾನ ಇಲಾಖೆಯವರು ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸುವುದಕ್ಕಾಗಿ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ, ಗುತ್ತಿಗೆ ಅವಧಿ ಮುಗಿದರೂ ಸಹಿತ ಕಾನೂನು ಬಾಹಿರವಾಗಿ ನಡೆಯುವ ಚಟುವಟಿಕೆಗಳನ್ನು ತಡೆಯುವಲ್ಲಿ

ವಿಫಲರಾಗಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ಆ ದಿನ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ತಮ್ಮ ಹೇಳಿಕೆಗಳನ್ನು ಸಲ್ಲಿಸಲು ದಿನಾಂಕ: 20/07/2017 ರಂದು ನಿಗಧಿಪಡಿಸಿದ್ದರು.

8. ದಿನಾಂಕ: 20/07/2017 ರಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮೆಸ್ಕಾಂ ಹಾಜರಿದ್ದು, ಮೊಗೂರು ಗ್ರಾಮದ ಸರ್ವೆ ನಂ. 62 ಮತ್ತು 72ರಲ್ಲಿ ಕಾರ್ಯಚರಿಸುತ್ತಿರುವ ಜೆಲ್ಲಿ ಕ್ರಷರ್ ಘಟಕಕ್ಕೆ ಸಂಬಂಧಿಸಿದ ಸ್ಥಾವರ ಸಂಖ್ಯೆ: ಟಿ.ಹೆಚ್.ಟಿ. 17ರ 01/08/2010 ರಿಂದ 01/07/2017 ರವರಿಗಿನ 78 ಬಿಲ್ಲುಗಳನ್ನು ಹಾಜರುಪಡಿಸಿದ್ದಾರೆ. ದಿನಾಂಕ: 01/05/2012 ರಿಂದ 01/09/2012 ರವರೆಗೆ ಸದರಿ ಸ್ಥಾವರಕ್ಕೆ ಕಂದಾಯ ಬಾಕಿ ಪ್ರಯುಕ್ತ ವಿದ್ಯುತ್ ನಿಲುಗಡೆಗೊಳಿಸಿರುವುದರಿಂದ ಸದರಿ 5 ತಿಂಗಳ ವಿದ್ಯುತ್ ಬಿಲ್ ನೀಡಿಲ್ಲ ಅಂತಾ ಕ್ರಮಾಂಕ ಸ.ಕ.ಇಂ.(ವಿ)/ಹಿ.ಸಾ/ಬೇ/2017-18/1802, ದಿನಾಂಕ: 19/07/2017ರಲ್ಲಿ ಉಲ್ಲೇಖಿಸಿದ್ದಾರೆ.

9. ಕಾರ್ಯನಿರ್ವಾಹಕ ಅಭಿಯಂತರರು ಮೆಸ್ಕಾಂ, ಪುತ್ತೂರು ವಿಭಾಗ ದಿನಾಂಕ: 04/02/2019 ರಂದು ಶ್ರೀಮತಿ ಸದಾ ಪುಷ್ಪ ಇವರ ಹೆಸರಿನಲ್ಲಿ ಇಟ್ಟಿಗೆ ಉದ್ಯಮಕ್ಕಾಗಿ ಮತ್ತು ಜೆಲ್ಲಿ ಕ್ರಷರ್‌ಗಾಗಿ ವಿದ್ಯುತ್ ಸಂಪರ್ಕಕ್ಕೆ ಪರವಾನಗಿ ನೀಡಿದ್ದರು, ಆದರೆ ಪರಿಸರ ಅಧಿಕಾರಿಗಳು ನೀಡಿರುವ ಪರವಾನಗಿ ದಿನಾಂಕ: 07/04/2010 ರವರೆಗೆ ಮಾತ್ರ ಇತ್ತು, ಆದರೆ ವಿದ್ಯುತ್ ಸಂಪರ್ಕವನ್ನು ಪರಿಸರ ಅಧಿಕಾರಿಗಳ ನಿರಾಪೇಕ್ಷಣಾ ಪತ್ರದ ಅವಧಿ ಮುಗಿದ ನಂತರ ದಿನಾಂಕ: 09/07/2010ರ ನಂತರ ನೀಡಿದ್ದಾರೆ ಎಂಬುದನ್ನು ಮಾನ್ಯ ಗೌರವಾನ್ವಿತರು ಸ್ಥಳ ಪರಿಶೀಲನೆ ಮಾಡಿದ ಸಮಯದಲ್ಲಿ ಕಂಡುಬಂದಿದ್ದಾಗಿ ಖಂಡಿಕೆ 15ರಲ್ಲಿ ಉಲ್ಲೇಖಿಸಿದ್ದಾರೆ. 2ನೇ ಎದುರುದಾರರು ಹಾಜರುಪಡಿಸಿರುವ ಮೇಲೆ ಉಲ್ಲೇಖಿಸಿರುವ 78 ವಿದ್ಯುತ್ ಬಿಲ್ಲುಗಳನ್ನು ಪರಿಶೀಲಿಸಿದಾಗ, ಪರಿಸರ ಅಧಿಕಾರಿಗಳ ನಿರಾಪೇಕ್ಷಣಾ ಪತ್ರದ ಅವಧಿ ಮುಗಿದ ನಂತರ ವಿದ್ಯುತ್ ಸಂಪರ್ಕ ನೀಡಿದ್ದಾರೆ, ಪುನ: ವಿದ್ಯುತ್ ಸಂಪರ್ಕವನ್ನು ಮುಂದುವರೆಸಲು ಪರಿಸರ ಅಧಿಕಾರಿಗಳ ನಿರಾಪೇಕ್ಷಣಾ ಪತ್ರ ಪಡೆದಿದ್ದಾರೆ ಎನ್ನುವ ಬಗ್ಗೆ ಯಾವುದೇ ದಾಖಲೆಗಳನ್ನು 2ನೇ ಎದುರುದಾರರು ಹಾಜರುಪಡಿಸಿಲ್ಲ. ಇದರಿಂದ 2ನೇ ಎದುರುದಾರರು ಕರ್ತವ್ಯ ಲೋಪ ಎಸಗಿದ್ದಾರೆ ಅಂತಾ ಮೇಲ್ನೋಟಕ್ಕೆ ಕಂಡುಬರುತ್ತದೆ.

10. ದಿನಾಂಕ: 20/07/2017ರ ಮಾನ್ಯ ಗೌರವಾನ್ವಿತರ ಆದೇಶದಂತೆ 3 ರಿಂದ 5ನೇ ಎದುರುದಾರರನ್ನು ಈ ಪ್ರಕರಣದಲ್ಲಿ ಎದುರುದಾರರನ್ನಾಗಿ ಸೇರ್ಪಡೆ ಮಾಡಲಾಗಿದೆ. 3 ರಿಂದ 5ನೇ ಎದುರುದಾರರ ಹುದ್ದೆಯ ಆಧಾರದ ಮೇರೆಗೆ ಈ ಪ್ರಕರಣದಲ್ಲಿ ಎದುರುದಾರರನ್ನಾಗಿ ಮಾಡಲಾಗಿದೆ. ಆದರೆ, ಅವರ

ಹೆಸರುಗಳನ್ನು ಸೇರಿಸಿರಲಿಲ್ಲ. ಸದರಿಯವರ ಹೆಸರುಗಳನ್ನು ಕಾರ್ಯನಿರ್ವಾಹಕ ಅಭಿಯಂತರರಿಗೆ ವಿಚಾರಿಸಲಾಗಿ, 2ನೇ ಹಾಗೂ 3ನೇ ಎದುರುದಾರರು ಒಬ್ಬರೇ ಆಗಿದ್ದಾರೆ ಅಂತಾ ತಿಳಿಸಿದ್ದಾರೆ. ಆದ್ದರಿಂದ, 2 ಮತ್ತು 3ನೇ ಎದುರುದಾರರು ಒಬ್ಬರೇ ಅಂತಾ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.

11. ದಿನಾಂಕ: 10/10/2017 ರಂದು 1ನೇ ಎದುರುದಾರರು ಮೊಗೂರು ಗ್ರಾಮದ ಸರ್ವೆ ನಂ. 72/1ರಲ್ಲಿ ಅಕ್ರಮ ಕಲ್ಲುಗಣಿಗಾರಿಕೆ ನಡೆದಿರುವ ಸಂಬಂಧ ಮಾನ್ಯ ಲೋಕಾಯುಕ್ತರ ಮೌಖಿಕ ಆದೇಶದಂತೆ ಸದರಿ ಪ್ರದೇಶದಲ್ಲಿದ್ದ ವಾಹನಗಳನ್ನು ವಶಪಡಿಸಿಕೊಂಡು ಕಲ್ಲುಗಣಿಗಾರಿಕೆಯನ್ನು ಸ್ಥಗಿತಗೊಳಿಸಿ ಜೆ.ಎಂ.ಎಫ್.ಸಿ., ನ್ಯಾಯಾಲಯ, ಬೆಳ್ತಂಗಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಅಂತಾ ವರದಿ ಸಲ್ಲಿಸಿ ಅದರೊಂದಿಗೆ ಮಹಜರ್, ಠಾಣಾಧಿಕಾರಿಗಳು, ಉಪ್ಪಿನಂಗಡಿ ಪೋಲೀಸ್ ಠಾಣೆ ಇವರಿಗೆ ವಾಹನ ಬಿಡುಗಡೆಗೆ ಬರೆದ ಪತ್ರ, ವಾಹನ ಮಾಲೀಕರಿಂದ ಪಡೆದ ನಷ್ಟ ಭರ್ತಿ ಪತ್ರ ಹಾಗೂ ಖಾಸಗಿ ದೂರಿನ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ಪಿ.ಸಿ.ಆರ್. 75/2017 ಅಂತಾ ನ್ಯಾಯಾಲಯದಲ್ಲಿ ದಾಖಲು ಪಡಿಸಿಕೊಂಡಿರುತ್ತಾರೆ, ಆದೇಶ ಪಟದ ಪ್ರತಿಯನ್ನು ಹಾಜರುಪಡಿಸಿದ್ದಾರೆ.

12. ದಿನಾಂಕ: 11/10/2017 ರಂದು ಮಂಗಳೂರಿನಲ್ಲಿ ನಡೆದ ಕ್ಯಾಂಪ್‌ನಲ್ಲಿ ಮಾನ್ಯ ಗೌರವಾನ್ವಿತರು ಹಾಜರಿದ್ದ ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ; ಡಿ.ಸಿ.ಎಫ್.; ಕಾರ್ಯಪಾಲಕ ಅಭಿಯಂತರರು, ಮೆಸ್ಕಾಂ; ಮತ್ತು ಕಂದಾಯ ನಿರೀಕ್ಷಕರು ಕಂದಾಯ ಜಮೀನು ಹಾಗೂ ಅರಣ್ಯ ಜಮೀನನ್ನು ಜಂಟಿಯಾಗಿ ಮೋಜಣಿ ಮಾಡಿ ವರದಿ ಸಲ್ಲಿಸುವಂತೆ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸೂಚಿಸಲಾಗಿತ್ತು. ಮೊಗೂರು ಗ್ರಾಮದ ಸರ್ವೆ ನಂ. 72/1ಕ್ಕೆ ಸಂಬಂಧಪಟ್ಟಂತೆ 154 ಎಕರೆಯ ಜಮೀನನ್ನು ಜಂಟಿ ಸರ್ವೆ ಮಾಡಿದ ಬಗ್ಗೆ ಕಂದಾಯ ಅಧಿಕಾರಿಗಳು ದಿನಾಂಕ: 14/12/2017 ರಂದು ತಿಳಿಸಿದ್ದಾರೆ.

13. ದಿನಾಂಕ: 15/03/2018 ರಂದು ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಂಗಳೂರು ರವರು ಪತ್ರ ಬರೆದು ಅದರಲ್ಲಿ, ದಿನಾಂಕ: 03/03/2018 ರಂದು ತಮ್ಮ ಕಛೇರಿಯ ತಾಂತ್ರಿಕ ಅಧಿಕಾರಿಗಳು ಮತ್ತು ಭೂಮಾಪನ ಇಲಾಖೆ, ಅರಣ್ಯ ಇಲಾಖೆ ಹಾಗೂ ಕಂದಾಯ ಇಲಾಖೆ ರವರು ಜಂಟಿ ಸಭೆ ನಡೆಸಿ pit measurement ಮಾಡಿರುತ್ತಾರೆ. ಈ ಬಗ್ಗೆ ಜೆ.ಎಂ.ಎಫ್.ಸಿ., ನ್ಯಾಯಾಲಯ, ಹಿರಿಯ ವಿಭಾಗ ಇಲ್ಲಿ ದಾಖಲಾದ ಪಿ.ಸಿ.ಆರ್. ನಂ. 75/2017 ರಲ್ಲಿ ಸಲ್ಲಿಸಲಾಗಿದೆ ಅಂತಾ ತಿಳಿಸಿದ್ದಾರೆ.

14. ಸದರಿ ಪತ್ರಕ್ಕೆ ಲಗತ್ತಿಸಿರುವ ಅಂದರೆ ಜೆ.ಎಂ.ಎಫ್.ಸಿ., ನ್ಯಾಯಾಲಯ, ಹಿರಿಯ ವಿಭಾಗ ಇಲ್ಲಿ ದಾಖಲಾದ ಪಿ.ಸಿ.ಆರ್. ನಂ. 75/2017 ರಲ್ಲಿ ಭೂವಿಜ್ಞಾನಿ ರವರು ಸಲ್ಲಿಸಿರುವ ಅರ್ಜಿಯಲ್ಲಿ ಶ್ರೀ ಪ್ರಸಾದ್ ಕಡ್ತಿಲ್ ಹಾಗೂ ಶ್ರೀ ಯೋಗೇಶ್ ಪೂಜಾರಿ ರವರು ಮೊಗೂರು ಗ್ರಾಮದ ಸರ್ವೆ ನಂ. 62/1, 62/2 ಮತ್ತು 72/1ರಲ್ಲಿ ಅಕ್ರಮ ಕಲ್ಲು ಗಣಿಗಾರಿಕೆ ಮಾಡಿದ್ದಾರೆ ಅಂತಾ ಆಪಾದಿಸಿದ್ದು, ಶ್ರೀ ಪ್ರಸಾದ್ ಕಡ್ತಿಲ್ ರವರು ಮಂಜೂರಾದ ಸ್ಥಳವನ್ನು ಹೊರತುಪಡಿಸಿ ಸಂಪೂರ್ಣವಾಗಿ ಹೊರಗೆ ಕಲ್ಲು ಗಣಿಗಾರಿಕೆ ನಡೆಸಿರುವುದು ಕಂಡುಬರುತ್ತದೆ, ಅವರಿಂದ ಸರ್ಕಾರಕ್ಕೆ ನಷ್ಟವಾಗಿರುವ ಬಾಕಿ ಮೊತ್ತ ರೂ.2,28,30,816/- ಪಾವತಿಸಲು ಆದೇಶಿಸುವಂತೆ ಹಾಗೂ ಅಕ್ರಮ ಕಲ್ಲು ಗಣಿಗಾರಿಕೆ ನಡೆಸಿರುವವರ ವಿರುದ್ಧ ನಿಯಮಾನುಸಾರ ಶಿಕ್ಷೆ ವಿಧಿಸುವಂತೆ ಕೋರಿದ್ದು ಕಂಡುಬರುತ್ತದೆ.

15. ದಿನಾಂಕ: 27/06/2018 ರಂದು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ವರದಿ ಹಾಗೂ ದಾಖಲೆಗಳನ್ನು ಸಲ್ಲಿಸಿದ್ದು, ಅದರಲ್ಲಿ ಮೀಸಲು ಅರಣ್ಯದೊಳಗೆ ಕಾರ್ಯಾಚರಿಸುತ್ತಿದ್ದ ಜೆಲ್ಲಿ ಹುಡಿ ಘಟಕವನ್ನು ಈಗಾಗಲೇ ಗಣಿ ಇಲಾಖೆ, ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆ ರವರಿಂದ ಅಮಾನತ್ತು ಪಡಿಸಲಾಗಿದೆ ಎಂದು ಉಲ್ಲೇಖಿಸಿದ್ದಾರೆ. ಅಲ್ಲದೇ, ಜಂಟಿ ಮೋಜಣಿ ಮಾಡಿದಾಗ ಅರಣ್ಯ ಕ್ಷೇತ್ರದ ಬ್ಲಾಕ್-ಎ ಗಡಿ ರೇಖೆಯೊಳಗೆ ಕಲ್ಲು ಗಣಿಗಾರಿಕೆ ನಡೆಸಲಾಗಿದೆ ಎನ್ನುವುದನ್ನು ಸಹಿತ ಉಲ್ಲೇಖಿಸಿದ್ದಾರೆ ಮತ್ತು ಅವರು ವರದಿಯೊಂದಿಗೆ ಹಾಜರುಪಡಿಸಿರುವ ಅನುಬಂಧ-1 ರಿಂದ 8ರ ದಾಖಲೆಗಳಿಂದ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ಮಾಡಿದ್ದಾರೆ ಎಂಬುದು ಕಂಡುಬರುತ್ತದೆ. 1ನೇ ಎದುರುದಾರರು ಹಾಜರುಪಡಿಸಿರುವ ಖಾಸಗಿ ದೂರಿನ ಪ್ರತಿ ಹಾಗೂ ಸ್ಥಳ ಪರಿಶೀಲನಾ ಮಹಜರ್ ಇವುಗಳನ್ನು ಸಹಿತ ಪರಿಶೀಲಿಸಲಾಗಿ, ಮೊಗೂರು ಗ್ರಾಮದ ಸರ್ವೆ ನಂ. 72/1ರಲ್ಲಿ ಸಹ ಅಕ್ರಮ ಕಲ್ಲು ಗಣಿಗಾರಿಕೆ ನಡೆಸಿದ್ದು ಕಂಡುಬರುತ್ತದೆ.

16. ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದಾಗ, ದೂರುದಾರರು ಆಪಾದಿಸಿದಂತೆ ಮೊಗೂರು ಗ್ರಾಮದ ಸರ್ವೆ ನಂ. 62 ಮತ್ತು 72ರಲ್ಲಿ ಅಕ್ರಮ ಗಣಿಗಾರಿಕೆ ನಡೆದು ಸರ್ಕಾರಕ್ಕೆ ಮೊತ್ತ ರೂ.2,28,30,816/- ನಷ್ಟವಾಗಿದ್ದರಿಂದ, 1ನೇ ಎದುರುದಾರರು ಸದರಿ ನಷ್ಟವನ್ನು ಪಾವತಿಸಲು ಆದೇಶಿಸುವಂತೆ ಹಾಗೂ ಅಕ್ರಮ ಕಲ್ಲು ಗಣಿಗಾರಿಕೆ ನಡೆಸಿರುವವರ ವಿರುದ್ಧ ನಿಯಮಾನುಸಾರ ಶಿಕ್ಷೆ ವಿಧಿಸುವಂತೆ ಜೆ.ಎಂ.ಎಫ್.ಸಿ., ನ್ಯಾಯಾಲಯ, ಬೆಳ್ತಂಗಡಿ ಇವರಿಗೆ ಸಲ್ಲಿಸಿದ ಖಾಸಗಿ ದೂರು ಸಂಖ್ಯೆ: 75/2017 ರಲ್ಲಿ ಕೋರಿದ್ದು ಕಂಡುಬರುತ್ತದೆ.

17. ಪರಿಸರ ಇಲಾಖೆಯವರು ನಿರ್ದಿಷ್ಟ ಸಮಯಕ್ಕೆ ವಿದ್ಯುತ್ ಸರಬರಾಜು ಮಾಡಲು ನಿರಾಪೇಕ್ಷಣಾ ಪತ್ರ ನೀಡಿದ್ದು, ಅದರ ಅವಧಿ ಮುಗಿದ ನಂತರ ಅಂದರೆ ದಿನಾಂಕ: 07/04/2010 ರವರೆಗೆ ಮಾತ್ರ ನಿರಾಪೇಕ್ಷಣಾ ಪತ್ರ ಊರ್ಜಿತವಾಗಿದ್ದರೂ ಸಹಿತ ಅದರ ಅವಧಿ ಮುಗಿದ ನಂತರ ದಿನಾಂಕ: 09/07/2010 ರಂದು 2ನೇ ಎದುರುದಾರರು ಜೆಲ್ಲಿ ಕ್ರಷರ್ ಮತ್ತು ಕಲ್ಲು ಗಣಿಗಾರಿಕೆಗೆ ವಿದ್ಯುತ್ ಸಂಪರ್ಕ ನೀಡಿದ್ದು ಹಾಗೂ ಪರಿಸರ ಇಲಾಖೆಯವರಿಂದ ಮುಂದಿನ ಅವಧಿಗಾಗಿ ನಿರಾಪೇಕ್ಷಣಾ ಪತ್ರ ಇಲ್ಲದೇ ಇದ್ದರೂ ಸಹಿತ ನಿರಂತರವಾಗಿ ಅವರಿಗೆ ವಿದ್ಯುತ್ ಸಂಪರ್ಕವನ್ನು ಮುಂದುವರೆಸಿದ್ದಾರೆ ಎಂಬುದು 2ನೇ ಎದುರುದಾರರು ಹಾಜರುಪಡಿಸಿರುವ ಮೇಲೆ ಉಲ್ಲೇಖಿಸಿರುವ 78 ವಿದ್ಯುತ್ ಬಿಲ್ಲುಗಳನ್ನು ಪರಿಶೀಲಿಸಿದಾಗ, ಪರಿಸರ ಅಧಿಕಾರಿಗಳ ನಿರಾಪೇಕ್ಷಣಾ ಪತ್ರದ ಅವಧಿ ಮುಗಿದ ನಂತರ ವಿದ್ಯುತ್ ಸಂಪರ್ಕ ನೀಡಿದ್ದಾರೆ ಹಾಗೂ ನಿಗಧಿತ ಅವಧಿಗೆ ನಿರಾಪೇಕ್ಷಣಾ ಪತ್ರ ನೀಡಿದ 4ನೇ ಎದುರುದಾರರು ತದನಂತರದಲ್ಲಿಯೂ ಸಹಿತ ನಿರಾಪೇಕ್ಷಣಾ ಪತ್ರ ಪಡೆಯದೇ ಅಕ್ರಮ ಗಣಿಗಾರಿಕೆಗಾಗಿ ವಿದ್ಯುತ್ ಸಂಪರ್ಕ ಪಡೆದವರ ವಿರುದ್ಧ ಸೂಕ್ತ ಕ್ರಮವನ್ನು ಜರುಗಿಸದೇ ಇರುವುದು ಸಹಿತ 2 ರಿಂದ 4ನೇ ಎದುರುದಾರರ ಕರ್ತವ್ಯ ಲೋಪವಾಗಿದೆ ಅಂತಾ ಮೇಲ್ನೋಟಕ್ಕೆ ಕಂಡುಬರುತ್ತದೆ.

ಶ್ರೀ ಸುಬ್ರಹ್ಮಣ್ಯಸ್ವಾಮಿ, ಎ.ಪಿ.ಸಿ.ಸಿ.ಎಫ್.

18. ~~5ನೇ ಎದುರುದಾರರು~~ ಸಲ್ಲಿಸಿರುವ ವರದಿಯಂತೆ ಮೀಸಲು ಅರಣ್ಯ ಕ್ಷೇತ್ರದಲ್ಲಿ ಗಣಿಗಾರಿಕೆ ನಡೆದರೂ ಸಹಿತ, ಅದನ್ನು ಪತ್ತೆ ಹಚ್ಚಿ ಹಾಗೂ ತಮ್ಮ ಮೀಸಲು ಅರಣ್ಯ ಕ್ಷೇತ್ರದ ಗಡಿಯನ್ನು ಗುರುತಿಸುವಲ್ಲಿ ನಿರ್ದಿಷ್ಟ ಕ್ರಮ ಜರುಗಿಸುವಲ್ಲಿ ಎದುರುದಾರರು ವಿಫಲರಾಗಿದ್ದರಿಂದ, ಅವರು ಸಹಿತ ಕರ್ತವ್ಯ ಲೋಪ ಎಸಗಿದ್ದಾರೆ ಅಂತಾ ಮೇಲ್ನೋಟಕ್ಕೆ ಕಂಡುಬರುತ್ತದೆ. ದಿನಾಂಕ: 07/03/2019 ರಂದು 1ನೇ ಎದುರುದಾರರು ಸಲ್ಲಿಸಿರುವ ವರದಿಯಂತೆ ಬೆಳ್ತಂಗಡಿ ತಾಲ್ಲೂಕು, ಮೊಗ್ರೂರು ಗ್ರಾಮದ ಸರ್ವೆ ನಂ. 62/1, 62/2, 72/1, 120/2, 121/2 ಮತ್ತು 121/6ರಲ್ಲಿ ಅಕ್ರಮ ಕಲ್ಲು ಗಣಿಗಾರಿಕೆಯನ್ನು ಶ್ರೀ ಪ್ರಸಾದ್ ಕಡ್ತಿಲ್ ಹಾಗೂ ಶ್ರೀ ಯೋಗೇಶ್ ಪೂಜಾರಿ ರವರು ನಡೆಸಿದ್ದರಿಂದ ಮತ್ತು ಒಟ್ಟಾಗಿ 76,102.72 ಮೆಟ್ರಿಕ್ ಟನ್‌ಗಳಷ್ಟು ಉಪ ಖನಿಜವನ್ನು ಅಕ್ರಮವಾಗಿ ಉತ್ಪಾದನೆ ಮಾಡಿ ಸಾಗಾಣಿಕೆ ಮಾಡಿರುವುದರಿಂದ ಸರ್ಕಾರಕ್ಕೆ ರೂ.2,28,30,816/- ನಷ್ಟವಾಗಿದೆ ಎನ್ನುವುದನ್ನು ಉಲ್ಲೇಖಿಸಿರುವುದನ್ನು ನೋಡಲಾಗಿ, ಎದುರುದಾರರ ಕರ್ತವ್ಯ ಲೋಪದಿಂದಾಗಿ ಸರ್ಕಾರಕ್ಕೆ ಅಷ್ಟೊಂದು ದೊಡ್ಡ ಪ್ರಮಾಣದ ಹಣದ ನಷ್ಟವಾಗಿದಲ್ಲದೇ, ನೈಸರ್ಗಿಕ ಸಂಪನ್ಮೂಲದ ಹಗಲು ದರೋಡೆಯಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ.

19. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1)(ii) ಮತ್ತು (iii) ರನ್ವಯ 1 ರಿಂದ 4ನೇ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, 1ನೇ ಎದುರುದಾರರಾದ–ಶ್ರೀ ಎಸ್.ಸುಮಿತ್ರ, ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ (ನಿವೃತ್ತಿ ದಿನಾಂಕ: 31/05/2026), 2 ಮತ್ತು 3ನೇ ಎದುರುದಾರರಾದ–ಶ್ರೀ ಎಸ್.ಡಿ.ನಾರಾಯಣ ಪೂಜಾರಿ, ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಓ & ಎಂ ವಿಭಾಗ, ಪುತ್ತೂರು, 4ನೇ ಎದುರುದಾರರಾದ–ಶ್ರೀ ರಾಜಶೇಖರ್ ಪುರಾಣಿಕ್, ಪರಿಸರ ಅಧಿಕಾರಿ, ಪುತ್ತೂರು ತಾಲ್ಲೂಕು, ಪುತ್ತೂರು (ನಿವೃತ್ತಿ ದಿನಾಂಕ: 31/07/2030) ಮತ್ತು, 5ನೇ ಎದುರುದಾರರಾದ–ಶ್ರೀ ಸುಬ್ರಹ್ಮಣ್ಯ ರಾವ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಪುತ್ತೂರು ತಾಲ್ಲೂಕು, ಪುತ್ತೂರು (ನಿವೃತ್ತಿ ದಿನಾಂಕ: 31/07/2023) ಇವರುಗಳ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಹಾಗೂ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

20. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

5/12/19

[ನ್ಯಾಯಮೂರ್ತಿ ಬಿ.ಎಸ್.ಪಾಟೀಲ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.